ಕೊಪ್ಪಳ ನಗರದಲ್ಲಿ ಜಿಲ್ಲಾ ಆಸ್ಪತ್ರೆ

175 ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) :– ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ಕೊಪ್ಪಳ ನಗರದಲ್ಲಿ ಜಿಲ್ಲಾ ಆಸ್ಪತ್ರೆ ಕಟ್ಟಡದ ಕೆಲಸ ಪ್ರಾರಂಭವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಹಾಗಿದ್ದಲ್ಲಿ, ಕಟ್ಟಡದ ಕಾಮಗಾರಿಯನ್ನು ಎಂದು ಪೂರ್ಣಗೊಳಿಸಲಾಗುವುದು; ಈ ಕಟ್ಟಡಕ್ಕೆ ನಿಗಧಿಪಡಿಸಿರುವ ಅನುದಾನ ಎಷ್ಟು ; (ವಿವರ ನೀಡುವುದು)

(ಇ) ಜಿಲ್ಲಾ ಆಸ್ಪತ್ರೆಯಲ್ಲಿ ಹಾಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರು ಹಾಗೂ ಇತರ ಸಿಬ್ಬಂದಿಗಳ ಸಂಖ್ಯೆ: ಎಷ್ಟು ; (ವರ್ಗವಾರು ವಿವರ ನೀಡುವುದು)

(ಈ) ಜಿಲ್ಲಾ ಆಸ್ಪತ್ರೆಯಲ್ಲಿ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ; (ವರ್ಗವಾರು ವಿವರ ನೀಡುವುದು)

ಉ) ಹಾಗಿದ್ದಲ್ಲಿ, ಖಾಲಿರುವ ಹುದ್ದೆಗಳನ್ನು ತುಂಬಲು ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)

ಶ್ರೀ ಬಿ.ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–

ಅ) ಬಂದಿರುತ್ತದೆ.

ಆ) ಕಟ್ಟಡದ ನಿರ್ಮಾಣಕ್ಕಾಗಿ ಟೆಂಡರ್ ಆಹ್ವಾನಿಸುವುದರ ಮೂಲಕ ಮೆ: ಬಿ.ಬಿ.ಐ.ಪಿ.ಎಲ್. Infrstructure (ಇಂಡಿಯ) ಪ್ರೈವೇಟ್ ಲಿ., ಇವರಿಗೆ ಕಾಮಗಾರಿಯ ಒಪ್ಪಿಗೆ ಪತ್ರವನ್ನು ದಿ: 20–05–2007 ರಂದು ನೀಡಲಾಯಿತು ಆದರೆ ಗುತ್ತಿಗೆದಾರರು ಒಪ್ಪಂದಕ್ಕೆ ನಿಗದಿಪಡಿಸಲಾದ ನಿರ್ವಹಣಾ ಮುಂಗಡ ಹಣವನ್ನು ಒದಗಿಸಲಾಗದ ಕಾರಣ ಕಾಮಗಾರಿಯನ್ನು ಹಿಂಪಡೆಯುವಂತೆ ಅಧೀಕ್ಷಕ ಅಭಿಯಂತರರು ಕೆ.ಹೆಚ್.ಎಸ್.ಡಿ.ಆರ್.ಪಿ., ಬೆಂಗಳೂರು ಇವರಿಗೆ ಪತ್ರದ ಮುಖೇನ ಕೋರಿದ್ದರು. ಈ ಹಿನ್ನೆಲೆಯಲ್ಲಿ ಸದರಿ ಗುತ್ತಿಗೆಯನ್ನು ರದ್ದುಪಡಿಸಿ ಮರು ಟೆಂಡರ್ ಕರೆಯಲು ತೀರ್ಮಾನಿಸಲಾಗಿದೆ. ಮರು ಟೆಂಡರ್ ಪ್ರಕ್ರಿಯೇ ಸುಮಾರು 4 ರಿಂದ 6 ತಿಂಗಳು ಆಗಬಹುದು. ಮರು ಟೆಂಡರ್

ಪ್ರಕ್ರಿಯೆ ಪೂರ್ಣಗೊಂಡು ಗುತ್ತಿಗೆದಾರರು ನೇಮಕವಾದಾಗಿನಿಂದ ಕಾಮಗಾರಿಯನ್ನು ಪೂರ್ಣಗೊಳಿಸಲು ಎರಡು ವರ್ಷಗಳ ಅವಶ್ಯಕತೆ ಇರುತ್ತದೆ. ಈ ಕಟ್ಟಡಕ್ಕೆ ಬೇಕಾದ ಪೂರ್ಣ ಅನುದಾನವಾದ ರೂ. 10 ಕೋಟಿಗಳು ಲಭ್ಯವಿರುತ್ತದೆ..

ಇ) ಎ ವರ್ಗ –ವೈದ್ಯರು –7

ಬಿ ವರ್ಗ

1. ಸಹಾಯಕ ಆಡಳಿತಾಧಿಕಾರಿಗಳು –1

ಸಿ ವರ್ಗ

1. ಕಛೇರಿ ಅಧೀಕ್ಷಕರು –1
2. ದ್ವಿದ.ಸ. –1
3. ಪ್ರಯೋಗ ಶಾಲಾ ತಂತ್ರಜ್ಞರು ಸಹಾಯಕರು –3
4. ಕ್ಷಕಿರಣ ತಂತ್ರಜ್ಞರು –1
5. ಕಿರಿಯ ಮಹಿಳಾ ಆರೋಗ್ಯ ಸಹಾಯಕರು –3
6. ಶಶ್ರೂಕರು –9
7. ಶಿಬಿರ ಸಂಯೋಜಕರು –1
8. ನೇತ್ರ ಸಹಾಯಕ –1
9. ವಾಹನ ಚಾಲಕ –1

ಡಿ. ವರ್ಗ –8

ಒಟ್ಟು –35

ಈ) ಎ ವರ್ಗ - ಖಾಲಿ ಇರುವುದಿಲ್ಲ

ಬಿ ವರ್ಗ –2 ಹುದ್ದೆಗಳು

ಸಿ ವರ್ಗ

1. ಪ್ರಯೋಗ ಶಾಲಾ ತಂತ್ರಜ್ಞರು –1
2. ಕ್ಷ ಕಿರಣ ತಂತ್ರಜ್ಞರು –1
3. ಫಾರ್ಮಸಿಸ್ಟ್ –2
4. ಶೂಶ್ರೂಷಕರು –11
5. ವಾಹನ ಚಾಲಕ –1

ಡಿ ವರ್ಗ –17

ಉ) ಇಲಾಖೆಯಲ್ಲಿ ಖಾಲಿರುವ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು 2008ನೇ ಸಾಲಿನಲ್ಲಿ 815 ವೈದ್ಯರ ಹುದ್ದೆಗಳನ್ನು ಲೋಕಸೇವಾ ಆಯೋಗದಿಂದ ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಹಾಗೂ ಗ್ರಾಮಾಂತರ ಪ್ರದೇಶದಲ್ಲಿ ಖಾಲಿ ಇರುವ ವೈದ್ಯರುಗಳನ್ನು ಗುತ್ತಿಗೆ ಆದಾರದ ಮೇಲೆ ನೇಮಕ ಮಾಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಅಧಿಕಾರ ನೀಡಲಾಗಿದೆ.

ಇಲಾಖೆಯಲ್ಲಿ ಖಾಲಿ ಇರುವ ಅರೆ ವೈದ್ಯಕೀಯ ಸಿಬ್ಬಂದಿಯನ್ನು ಭರ್ತಿ ಮಾಡುವ ಸಲುವಾಗಿ ಅರ್ಥಿಕ ಇಲಾಖೆಯ ಸಹಮತಿ ಕೋರಲಾಗಿ ಪ್ರಸಕ್ತ ಸಾಲಿನಲ್ಲಿ 3228 ಹುದ್ದೆಗಳನ್ನು ಹಾಗೂ 1000 ಹುದ್ದೆಗಳನ್ನು ಒಟ್ಟು 4228 ಹುದ್ದೆಗಳನ್ನು ತುಂಬಲು ಮತ್ತು ಮುಂದಿನ ವರ್ಷ 1017 ಹುದ್ದೆಗಳನ್ನು ತುಂಬಲು ಅನುಮತಿ ನೀಡಿದೆ. ಈ ಬಗ್ಗೆ ವಿಶೇಷ ನಿಯಮಗಳನ್ನು ರೂಪಿಸಿ ಸದರಿ ಹುದ್ದೆಗಳನ್ನು ಭರ್ತಿ ಮಾಡುವ ಪ್ರಕ್ರಿಯೆ ಜಾರಿಯಲ್ಲಿದೆ.

69 ಶ್ರೀ. ಕುಮಾರಸ್ವಾಮಿ ಹೆಚ್.ಕೆ.(ಸಕಲೇಶಪುರ) :– ಮಾನ್ಯ ಆರೋಗ್ಯ ಮತ್ತು ಕುಟುಂಬಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

(ಅ) ರಾಜ್ಯದ ಆಸ್ಪತ್ರೆಗಳಲ್ಲಿ ವೈದ್ಯರ ಮತ್ತು ಇತರೆ ಸಿಬ್ಬಂದಿಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಪದವಿ ವೈದ್ಯರು, ಸ್ನಾತಕೋತರ ವೈದ್ಯರು, ಶುಶ್ರೂಷಕರು 4ನೇ ದರ್ಜೆ ನೌಕರರ ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ;

(ಇ) ಮೇಲ್ದರ್ಜೆಗೇರಿಸಿರುವ ಆಸ್ಪತ್ರೆಗಳಲ್ಲಿ ಸಿಬ್ಬಂದಿಯನ್ನು ಯಾವಾಗ ಮಂಜೂರಾತಿ ನೀಡಿ, ನೇಮಕ ಮಾಡಲಾಗುವುದು.

(ಈ) ಖಾಲಿ ಇರುವ ಹುದ್ದೆಗಳನ್ನು ಯಾವಾಗ ತುಂಬಲಾಗುವುದು.;

ಉ) ಪದವಿ ವೈದ್ಯರ ವೇತನವನ್ನು ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ?

ಶ್ರೀ ಬಿ.ಶ್ರೀರಾಮುಲು (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):–

(ಅ) ಬಂದಿದೆ.

(ಆ) ರಾಜ್ಯದ ಪದವಿ ವೈದ್ಯರು : 204, ಸ್ನಾತಕೋತರ ವೈದ್ಯರು : 1102 ಶುಶ್ರೂಷಕರು: 3327, 4ನೇ ದರ್ಜೆ ನೌಕರರು 1580 ಹುದ್ದೆಗಳು ಖಾಲಿ ಇರುತ್ತವೆ.